**<u>ಸಾಕ್ಷಿಯನ್ನು ದಿನಾಂಕಃ 13.06.2025 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟಿ ಸವಾಲು – ಶ್ರೀ ಎಂ.ಎಂ.ಎಸ್. ವಕೀಲರಿಂದ ಎದುರುದಾರರ ಪರ :</u>**

1. ನನ್ನ ತಂದೆ ಮರಣ ಹೊಂದಿ 4 ವರ್ಷಗಳಾಗಿರುತ್ತವೆ. ನನ್ನ ತಾಯಿಯ ಹೆಸರು ಪುಟ್ಟಮಾದಮ್ಮ. ನಾವು ಐದು ಜನ ಮಕ್ಕಳು. ಅವರುಗಳೆಂದರೆ ಮಲ್ಲಮ್ಮ, ಗೌರಮ್ಮ, ಮಹದೇವಮ್ಮ, ಶಶಿಕಲಾ ಮತ್ತು ನಾನು. ನನ್ನ ತಂದೆಯವರು ಈ ನ್ಯಾಯಾಲಯದ ಮುಂದೆ ಹೇಳಿದ ಸಾಕ್ಷಿ ವಿಚಾರಣೆಯ ಬಗ್ಗೆ ಗೊತ್ತಿದೆ. ಈ ಪ್ರಕರಣದಲ್ಲಿ ಆದಂತಹ ತೀರ್ಪಿನ ಪರಿಹಾರದ ಹಣ ನನ್ನ ತಂದೆಯವರು ಸ್ವೀಕರಿಸಿದ್ದಾರೆ ಎಂದರೆ ಸರಿ.

2. ಮೈಸೂರಿನಿಂದ ನಮ್ಮ ಊರು ಕೋಚನಹಳ್ಳಿ 12 ಕಿ.ಮೀ. ಅಂತರದಲ್ಲಿ ಇರುತ್ತದೆ. ಬೇರೆಯವರಿಗೆ ಹೆಚ್ಚಿನ ಪರಿಹಾರ ಬಂದಿದೆ ಎಂದು ಹೇಳಿದ ಬಗ್ಗೆ ಅವರ ಹೆಸರು ಮತ್ತು ಸರ್ವೆ ಸಂಖ್ಯೆ ಕೇಳಿದ ಪ್ರಶ್ನೆಗೆ ಸಾಕ್ಷಿಯು ನಮ್ಮ ಊರಿನ ಮಹದೇವಯ್ಯ, ಸರ್ವೆ ನಂ.123 ಮತ್ತು ಹೂವಮ್ಮ, ಸರ್ವೆ ನಂ.123 ಎಂದು ನುಡಿಯುತ್ತಾರೆ.

3. ನಮ್ಮ ಜಮೀನು ಮಳೆ ಆಶ್ರಿತ ಜಮೀನು ಎಂದರೆ ಸರಿ. ಮಹದೇವಮ್ಮ ಮತ್ತು ಹೂವಮ್ಮರವರ ಜಮೀನುಗಳಲ್ಲಿ ಬೋರವೆಲ್ ಇತ್ತು ಎಂದರೆ ಸಾಕ್ಷಿ ನಮ್ಮ ಜಮೀನಿನಲ್ಲಿಯೂ ಸಹ ಬೋರವೆಲ್ ಇದೆ ಎಂದು ನುಡಿಯುತ್ತಾರೆ. ಈ ಬಗ್ಗೆ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ.

**ಮುಂದಿನ ಪಾಟಿಸವಾಲಿನ ಪ್ರಶ್ನೆಗಳನ್ನು ಸಾಕ್ಷಿಯ ತಂದೆಯವರಿಗೆ ಕೇಳಿದ**



This is a True Copy of the Court Records Online. Authenticated @ districts.ecourtsindia.com/cnr/KAMS020001472013/truecopy/order-3.pdf

www.ecourtsindia.com

ಪ್ರಶ್ನೆಗಳನ್ನು ಅಳವಡಿಸಿಕೊಳ್ಳುತ್ತೇನೆ ಎಂದು ನುಡಿಯುತ್ತಾರೆ.

ಮರು ವಿಚಾರಣೆ ಇಲ್ಲ.

ಸಾಕ್ಷಿ ಹೇಳಿದ್ದನ್ನು ಯಥಾವತ್ತಾಗಿ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಸಿ.ಜೆ.ಎಂ., ಮೈಸೂರು.



This is a True Copy of the Court Records Online. Authenticated @ districts.ecourtsindia.com/cnr/KAMS020001472013/truecopy/order-3.pdf

www.ecourtsindia.com